# <u>ಕರ್ನಾಟಕ ಸರ್ಕಾರದ ನಡವಳಿ</u>

ವಿಷಯ  ಬಹಳ ಹಿಂದೆ ನಿವೃತ್ತರಾದ ಸರ್ಕಾರಿ ನೌಕರರ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಹೆಚ್ಚಿಸುವ ಬಗ್ಗೆ.

****

**ಓದಲಾಗಿದೆ:** ಸರ್ಕಾರಿ ಆದೇಶ ಸಂಖ್ಯೆ ಆಇ(ವಿ) 03 ಪಿಇಎನ್ 2007(II) ದಿನಾಂಕ: 6.6.2007.

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ದಿನಾಂಕ: 6.6.2007ರ ಸರ್ಕಾರಿ ಆದೇಶದಲ್ಲಿ ಐದನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳಂತೆ ನಿವೃತ್ತಿದಾರರಿಗೆ ಮತ್ತು ಕುಟುಂಬ ಪಿಂಚಣಿದಾರರಿಗೆ ಕೆಲವೊಂದು ಹೆಚ್ಚುವರಿ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿರುತ್ತದೆ.

2) 5ನೇ ರಾಜ್ಯ ವೇತನ ಆಯೋಗವು ಬಹಳ ಹಿಂದೆ ನಿವೃತ್ತರಾದವರ ನಿವೃತ್ತಿ ವೇತನ ತುಂಬಾ ಕಡಿಮೆ ಇರುವುದನ್ನು ಮನಗಂಡು, ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತದೆ.

3) ಈ ಶಿಫಾರಸ್ಸನ್ನು ಕಾರ್ಯಗತಗೊಳಿಸುವ ವಿಧಿವಿಧಾನಗಳ ಬಗ್ಗೆ ಸರ್ಕಾರವು ಪರಿಶೀಲಿಸಿ, ಇಂತಹ ಪಿಂಚಣಿದಾರರಿಗೆ, ನಿವೃತ್ತಿ ದಿನಾಂಕದ ಆಧಾರದ ಮೇಲೆ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದಲ್ಲಿ ಹೆಚ್ಚಳವನ್ನು ನೀಡುವ ಮೂಲಕ ಪರಿಹಾರ ನೀಡುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಈ ಕಳಕಂಡಂತೆ ಆದೇಶಿಸಿದೆ.

## <u>ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 27 ಪಿಇಎನ್ 2007</u>
## <u>ಬೆಂಗಳೂರು, ದಿನಾಂಕ: 13ನೇ ಅಕ್ಟೋಬರ್ 2010</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ **<u>ದಿನಾಂಕ: 1.7.1993ಕ್ಕಿಂತ ಮುಂಚಿತವಾಗಿ ನಿವೃತ್ತರಾದವರ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ದಿನಾಂಕ: 1.4.2006</u>** ರಿಂದ ಜಾರಿಗೆ ಬರುವಂತೆ ಅವರ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನವನ್ನು ಈ ಕೆಳಗಿನಂತೆ ಹೆಚ್ಚಿಸಲು ಮಂಜೂರಾತಿ ನೀಡಲಾಗಿದೆ.

| **ದಿನಾಂಕ: 1.4.2006 ರಂದು ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ವಯಸ್ಸು** | **ದಿನಾಂಕ: 1.4.2006 ರಿಂದ ಹೆಚ್ಚುವರಿ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ** |
|---|---|
| 1) 80 ರಿಂದ 85 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 20 ರಷ್ಟು |
| 2) 85 ರಿಂದ 90 ವಯಸ್ಸಿನ ಒಳಗಿನವರಿಗೆ | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 30 ರಷ್ಟು |
| 3) 90 ವಯಸ್ಸನ್ನು ಮೀರಿದವರಿಗೆ | ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 50 ರಷ್ಟು |

ಮೇಲೆ ವಿವರಿಸಿದಂತೆ ಮಂಜೂರು ಮಾಡಿರುವ ಹೆಚ್ಚಳವು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:

1) ಪಿಂಚಣಿದಾರರು 80 ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸು ಪೂರ್ತಿಗೊಳಿಸಿದಂತೆ ಅವರ ಪಿಂಚಣಿಯನ್ನು ಮೇಲಿನಂತೆ ಹೆಚ್ಚಿಸಲಾಗಿದೆ. ಅಂತಹ ಪ್ರಕರಣಗಳಲ್ಲಿ ಯಾವ ತಿಂಗಳಿನಲ್ಲಿ 80, 85 ಮತ್ತು 90 ವಯಸ್ಸು ಪೂರ್ತಿಗೊಳಿಸುತ್ತಾರೋ ಆ ತಿಂಗಳ ಪ್ರಾರಂಭದಿಂದಲೇ ಲಭ್ಯವಾಗುವ ಹೆಚ್ಚಳವನ್ನು ನೀಡತಕ್ಕದ್ದು.

2) **<u>ಈ ಆದೇಶವು ದಿನಾಂಕ: 1.7.1993 ರಂದು ಅಥವಾ ನಂತರ ನಿವೃತ್ತರಾದವರಿಗೆ ಅನ್ವಯಿಸುವುದಿಲ್ಲ.</u>**

3) ಈ ಹೆಚ್ಚಳವನ್ನು ದಿನಾಂಕ: 1.4.2006ರಂದು ಪಡೆಯುತ್ತಿದ್ದ ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಮೇಲೆ ಲೆಕ್ಕ ಹಾಕತಕ್ಕದ್ದು.

4) ಹೆಚ್ಚಳದ ಮೊತ್ತವನ್ನು ಇನ್ನು ಮುಂದೆ ಖಜಾನಾಧಿಕಾರಿಗಳು/ಪಾವತಿಸುವ ಬ್ಯಾಂಕುಗಳು ಪಿ.ಪಿ.ಓ.ದಲ್ಲಿ ಪ್ರತ್ಯೇಕ ಭಾಗವಾಗಿ (distinct element) ನಮೂದಿಸತಕ್ಕದ್ದು.

5) ಈ ಆದೇಶದನ್ವಯ ಮಂಜೂರು ಮಾಡಲಾದ ಹೆಚ್ಚಳವನ್ನು ದಿನಾಂಕ: 1.4.2006ರಿಂದ ತುಟ್ಟಿಭತ್ಯೆಯ ಲೆಕ್ಕಾಚಾರಕ್ಕೆ ಪರಿಗಣಿಸತಕ್ಕದ್ದು.

6) ಈ ಹೆಚ್ಚಳದನ್ವಯ ಪಿಂಚಣಿಯ ಪರಿವರ್ತನೆಗೆ (ಕಮ್ಯುಟೇಶನ್) ಅವಕಾಶವಿಲ್ಲ.

7) ಪಿಂಚಣಿ ಪಾವತಿ ಪ್ರಾಧಿಕಾರಿಗಳಾದ ಖಜಾನೆ/ಬ್ಯಾಂಕುಗಳು ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿಯನ್ನು ಚಾಲ್ತಿಯಲ್ಲಿರುವ ಪಿಂಚಣಿ/ಕುಟುಂಬ ಪಿಂಚಣಿಯನ್ನು ಮೇಲಿನ ದರದಲ್ಲಿ ಯಾವುದೇ ಪ್ರಾಧೀಕರಣ ಪಡೆಯದೇ ಪಾವತಿಸಕ್ಕದ್ದು.

8) ಪಿ.ಪಿ.ಓ. ಗಳಲ್ಲಿ ಪಿಂಚಣಿದಾರನ/ಕುಟುಂಬ ಪಿಂಚಣಿದಾರನ ಜನ್ಮ ದಿನಾಂಕ ಇದ್ದಲ್ಲಿ ಪಿಂಚಣಿ ಪಾವತಿ ಪ್ರಾಧಿಕಾರವು ಪಿ.ಪಿ.ಓ.ನಲ್ಲಿರುವ ಜನ್ಮ ದಿನಾಂಕದ ಆಧಾರದ ಮೇಲೆ ಹೆಚ್ಚುವರಿ ಪಿಂಚಣಿಯನ್ನು ಪಾವತಿಸತಕ್ಕದ್ದು.

9) ಪಿ.ಪಿ.ಓ.ನಲ್ಲಿ ಜನ್ಮ ದಿನಾಂಕವನ್ನು ನಮೂದಿಸದಿದ್ದರೆ ಪಿಂಚಣಿ ಮಂಜೂರಾತಿ ಪ್ರಾಧೀಕಾರವು ಪಿಂಚಣಿದಾರನ/ಕುಟುಂಬ ಪಿಂಚಣಿದಾರನ ಜನ್ಮ ದಿನಾಂಕವನ್ನು ಮತ್ತು ವಯಸ್ಸನ್ನು ಖಚಿತಪಡಿಸಿಕೊಂದು ಪಿ.ಪಿ.ಓ.ದಲ್ಲಿ ನಮೂದಿಸಿ ಸಂಬಂಧಪಟ್ಟ ಖಜಾನೆ/ಬ್ಯಾಂಕುಗಳಿಗೆ ಅನುಕೂಲವಾಗುವಂತೆ ಹೆಚ್ಚುವರಿ ಪಿಂಚಣಿ/ಕುಟುಂಬ ಪಿಂಚಣಿ ಪಾವತಿ ಬಗ್ಗೆ ಪಿಂಚಣಿ ಪಾವತಿ ಪ್ರಾಧೀಕಾರಕ್ಕೆ ಕಳುಹಿಸತಕ್ಕದ್ದು.

10) ಈ ಆದೇಶದನ್ವಯ ಲಭ್ಯವಾಗುವ ಹೆಚ್ಚುವರಿ ಪಿಂಚಣಿ ಮತ್ತು ಅದರನ್ವಯ ಲಭ್ಯವಾಗುವ ತುಟ್ಟಿಭತ್ಯೆ ವ್ಯತ್ಯಾಸದ ಮೊತ್ತವನ್ನು ದಿನಾಂಕ: 1.4.2006ರಿಂದ ಲೆಕ್ಕ ಹಾಕಿ ನಗದಾಗಿ ಪಾವತಿಸತಕ್ಕದ್ದು/ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.

11) ಈ ಆದೇಶದಿಂದಾಗಿ ಪಾವತಿಸಬೇಕಾದ ಹೆಚ್ಚುವರಿ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನ ಮೊತ್ತದಲ್ಲಿ 50 ಪೈಸೆ ಮತ್ತು ಅದಕ್ಕಿಂತ ಹೆಚ್ಚಿನ ಭಿನ್ನಾಂಶಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು 50 ಪೈಸೆಗಿಂತ ಕಡಿಮೆ ಇರುವ ಭಿನ್ನಾಂಶವನ್ನು ಕಡೆಗಣಿಸತಕ್ಕದ್ದು.

ಈ ಆದೇಶವನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆಗಳು ಉದ್ಭವಿಸಿದಲ್ಲಿ ಅದನ್ನು ಪರಿಶೀಲಿಸಲು ಮತ್ತು ಅಗತ್ಯ ಪರಿಹಾರ ಕ್ರಮ ಕೈಗೊಳ್ಳಲು ಆರ್ಥಿಕ ಇಲಾಖೆಯ ವಿಶೇಷಾಧಿಕಾರಿ (ವಿಶ್ರಾಂತಿ ವೇತನ) ಇವರಿಗೆ ಕಳುಹಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

**ಇವರಿಗೆ:**

1) ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
4) ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳು
5) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
6) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
7) ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಜಿ.ಎಂ.ಶಾಖೆ, ಬೆಂಗಳೂರು
8) ರಿಜಿಸ್ಟ್ರಾರ್, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
9) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
10) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು.

11) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
12) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13) ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರು ಖಜಾನೆ ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು.
14) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
15) ಸಂಕಲನಕಾರರು, ಕರ್ನಾಟಕ ಗೆಜೆಟ್‌ನ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ
16) ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ ಬೆಂಗಳೂರು
17) ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ, ಕಬ್ಬನ್ ಉದ್ಯಾನವನ ಬೆಂಗಳೂರು
18) ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು
19) ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
20) ವಾರಪತ್ರ.

## PROCEEDINGS OF THE GOVERNMENT OF KARNATAKA

**Sub**: Enhancement of Pension/Family pension of the Government servants who retired long ago.

**Read:** Govt. Order No. FD (Spl) 03 PEN 2007(II) dated 6.6.2007.

**Preamble:**

As per the recommendation of the 5th State Pay Commission, additional pensionary benefits have been sanctioned to the pensioners & Family pensioners in the Government Order dated: 6.6.2007 read above.

While observing that the pension of the pensioners who had retired long ago is very less, the 5th State Pay Commission has recommended for enhancing their pension/family pension.

The Government after examining the modalities of implementing this recommendation, has decided to give relief to such pensioners/family pensioners by way of enhancing their pension/family pension, based on the date of retirement, and has ordered as below:

**ORDER NO. FD (SPL) 27 PEN 2007 ,**
**BANGALORE, DATED:13th OCTOBER 2010**

In view of the reasons explained in the preamble, sanction is accorded to enhance w.e.f.1.4.2006 the pension/Family pension of the Government servants who have retired or died while in service prior to 1.7.1993.

| Age of Pensioners / Family Pensioners as on 1.4.2006 | Additional Pension / Family Pension from 1.4.2006 |
|---|---|
| From 80 years to less than 85 years | 20% of basic pension/family pension |
| From 85 years to less than 90 years | 30% of basic pension/family pension |
| Above 90 years | 50 % of basic pension/family pension |

The increase sanctioned as above, is subject to the following conditions:

(1) As and when the pensioner attains the age of 80years and more the pension is enhanced as above. The increase in their pension in such cases is paid from the begining of the month they complete the age of 80,85 and 90 years.

(2) This order is not applicable to pensioners who have retired on or after 1.7.93.

(3) This increase shall be calculated on Basic pension/Family pension as on 1.4.2006.

(4) The Treasury Officer/disbursing Banks shall in future show the enhanced amount in the P.P.Os. as distinct element .

(5) The enhancement sanctioned as per this G.O. shall count for calculation of D.A. from 1.4.2006.

(6) Commutation of pension is not permissible with reference to this increase in pension.

(7) Pension disbursing authority viz., Banks/Treasury are authorised to pay additional pension/Family pension to existing pension/family pension at the above rates without any authorisation.

(8) Wherever the date of birth of the pensioner/Family pension exists in the P.P.Os. the pension disbursing authorities, based on the date of birth in the P.P.O. shall pay the additional pension.

(9) However where date of birth is not indicated in the P.P.Os. the pension sanctioning authority should ensure that the date of birth and the age of pensioner/family pensioner is invariably indicated and sent to the concerned Treasury/Banks to facilitate payment of additional pension/family pension by the pension disbursing authorities.

(10) The enhanced pension admissible as per this G.O. and the difference amount of D.A. from 1.4.2006 shall be calculated and paid in cash/credited to Bank accounts.

(11) The payment on account of the increase in pension/family pension as per this order involving fractions of 50 paise and above shall be rounded off to the next rupee and fractions less than 50 paise shall be ignored.

Any difficulty encountered in the implementation of this order may be reffered to Special Officer (Pension) in Finance Department.

**BY ORDER AND IN THE NAME OF THE GOVERNOR OF KARNATAKA,**

**(PADMAVATHI)**
**Special Officer & Ex-Officio**
**Deputy Secretary to Government,**
**Finance Department (Pension)**

**To**

1. The Chief Secretary/Additional Chief Secretaries to Government.
2. The Principal Secretaries/Secretaries to Government.
3. The Heads of Departments.
4. The Deputy Commissioners of Districts.

5. The Chief Executive Officers of Zilla Panchayaths.
6. The Principal Accountant General (Civil & Commercial Audit), Karnataka, Bangalore.
7. The Accountant General (Revenue Receipts & Public Works & Forest Audit), Karnataka, Bangalore.
8. The Accountant General (Accounts & Entitlement), Karnataka, Bangalore.
9. The Registrar, Hig`h Court of Karnataka, Bangalore.
10. The Registrar, Karnataka Lokayukta, Bangalore.
11. The Registrar, Karnataka Administrative Tribunal, Bangalore.
12. The Secretary, Karnataka Public Service Commission, Bangalore.
13. The Secretary, Karnataka Legislative Assembly/Legislative Council, Bangalore.
14. The Treasury Officer, State Huzur Treasury/District Treasuries.
15. The Compiler, Karnataka Gazette for publication in the next issue of the gazette
16. The President, Karnataka State Retired Employees Association, Bangalore.
17. All Sections of the Karnataka Government Secretariat.
18. Karnataka Government Secretariat Library/Legislature Library.
19. Weekly Gazette.Section Guard File.